**ಓ.ಎಸ್. ನಂಃ 358/2021**

**ಪಿ.ಡಬ್ಲ್ಯೂಃ 1**

**ದಿನಾಂಕ 28.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃಶ್ರೀ ಕೆ.ಬಿ.ಜಿ ವಕೀಲರಿಂದಃ**

10. ನಾನು ದಾವಾ ಆಸ್ತಿಯ ಪಕ್ಕದಲ್ಲಿ ಕಾರ್ ವರ್ಕ ಶಾಪ್ ನಡೆಸಲು ಪುರಸಭೆಯಿಂದ ಪರವಾನಿಗೆಯನ್ನು ಪಡೆದಿರುತ್ತೇನೆ. ಟಿಂಕರಿಂಗ್ ಎಂದರೆ ಗಾಡಿಗಳ ವೆಲ್ಡಿಂಗ್ ಕೆಲಸ ಮಾಡುವುದಾಗಿರುತ್ತದೆ. ಅಪಘಾತದಲ್ಲಿ ನಜ್ಜುಗುಜ್ಜಾದ ಗಾಡಿಗಳನ್ನು ಕಬ್ಬಿಣವನ್ನು ಬಳಸಿ ಅವುಗಳನ್ನು ಯತಾಸ್ಥಿತಿಗೆ ತರುವುದಕ್ಕೆ ಟಿಂಕರಿಂಗ್ ಎನ್ನುತ್ತೇವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಗಾಡಿಗಳನ್ನು ರಿಪೇರಿ ಮಾಡಲು ಮೊದಲು ಸದರಿ ಗಾಡಿಗಳನ್ನು ಚಾಲು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಕೇವಲ ಗಾಡಿಗಳಿಗೆ ಕೀ ಹಾಕಿ ನಂತರದಲ್ಲಿ ಸ್ಕ್ಯಾನರ್ ನಿಂದ ಪರಿಶೀಲಿಸಿದರೆ ಗಾಡಿಗಳಲ್ಲಿ ಇರುವ ಲೋಪದೋಷ ಗೊತ್ತಾಗುತ್ತದೆ ಎಂದು ನುಡಿದಿರುತ್ತಾರೆ.

11. ಕೆಟ್ಟು ಹೋದ ಗಾಡಿಗಳನ್ನು ಚಾಲು ಮಾಡಲು ವೈರ್ ಗಳಿಂದ ಮಶಿನ್ ಗಳಿಗೆ ಜೋಡಣೆ ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ನನ್ನ ವರ್ಕಶಾಪ್ ಗೆ ರಿಪೇರಿಗೆ ಎಂದು ಬರುವ ಕೆಟ್ಟು ಹೋಗಿರುವ ಗಾಡಿಗಳಲ್ಲಿ ಆಯಿಲ್ ಲೀಕ್ ಆಗುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಪ್ರಮಾಣದಲ್ಲಿ ಆಗುತ್ತದೆ ಎಂದು ನುಡಿದಿರುತ್ತಾರೆ. ಗಾಡಿಗಳಿಂದ ಹೊರಬೀಳುವ ಆಯಿಲ್ ನಿಂದ ದುರ್ವಾಸನೆ ಬರುತ್ತದೆ ಎಂದರೆ ಸರಿಯಲ್ಲ. ವಾದಿಯ ಮನೆಯ ಸುತ್ತಲೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿರುತ್ತಾರೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ನಾನು ಕಾರ್ ವರ್ಕಶಾಪ್ ಆರಂಭಿಸಿದ ದಿನದಿಂದಲೂ ನನ್ನ ವರ್ಕ ಶಾಪ್ ನಲ್ಲಿ ಗಾಡಿಗಳನ್ನು ಟಿಂಕರಿಂಗ್ ಮತ್ತು ರಿಪೇರಿ ಮಾಡುವಾಗ ಆಗುತ್ತಿರುವ ಶಬ್ದ ಮಾಲೀನ್ಯ ಮತ್ತು ವಾಯು ಮಾಲೀನ್ಯವನ್ನು ವಾದಿಯ ಮನೆಗೆ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದು, ಅದನ್ನು ವಾದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

12. ವಾದಿಯ ತಾಯಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಮ್ಮ ಕಾರ ವರ್ಕಶಾಪ್ ನಿಂದ ಹೊರಬರುವ ವಿಷಪೂರಿತ ಹೊಗೆಗಳಿಂದ, ನಾವು

ಉಪಯೋಗಿಸುವ ರಾಸಾಯನಿಕ ವಸ್ತುಗಳಿಂದ ಮತ್ತು ಶಬ್ದ ಮಾಲೀನ್ಯದಿಂದ ವಾದಿಯ ತಾಯಿಯ ಆರೋಗ್ಯ ಹದಗೆಟ್ಟು ಅವರು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಮಕ್ಕಳಿಗೆ ಎಷ್ಟು ವಯಸ್ಸಾಗಿರುತ್ತದೆ ಮತ್ತು ಅವರು ಯಾವ ತರಗತಿಯಲ್ಲಿ ಕಲಿಯುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯ ಮಕ್ಕಳು ಇಂಜಿನಿಯರಿಂಗ್ ಕಲಿಯುತ್ತಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿಯ ಮಕ್ಕಳು ಮನೆಯಲ್ಲಿಯೇ ಕುಳಿತು ನೌಕರಿ ಮಾಡುತ್ತಿದ್ದಾರೆ (Work From home) ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

13. ವಾದಿಯ ಮನೆಯಲ್ಲಿ ವಯಸ್ಸಾದವರು ಮತ್ತು ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳು ಇದ್ದು, ನಾನು ನಡೆಸುತ್ತಿರುವ ಕಾರ್ ವರ್ಕಶಾಪ್ ನಿಂದ ಬರುವ ಹಾನಿಕಾರಕ ಹೊಗೆ ಮತ್ತು ರಾಸಾಯನಿಕ ವಸ್ತುಗಳಿಂದ ಅವರ ಆರೋಗ್ಯಕ್ಕೆ ಹಾನಿಯಾಗಿ ನನ್ನ ಕಾರ್ ವರ್ಕಶಾಪ್ ನಿಂದ ಬರುತ್ತಿರುವ ಶಬ್ದ ಮಾಲೀನ್ಯದಿಂದ ಅವರ ವಿದ್ಯಾಭ್ಯಾಸಕ್ಕೆ ಮತ್ತು ಉದ್ಯೋಗಕ್ಕೆ ತೊಂದರೆಯಾಗುತ್ತಿದೆ ಎಂದರೆ ಸರಿಯಲ್ಲ. ಸದರಿ ವಿಷಯದ ಬಗ್ಗೆ ವಾದಿಯು ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಹಲವಾರು ಬಾರಿ ನನ್ನ ಬಳಿ ಬಂದು ಚರ್ಚಿಸಿದ್ದರೂ ಸಹ ನಾನು ಅವರ ಮಾತಿಗೆ ಕಿವಿ ಕೊಡಲಿಲ್ಲ ಎಂದರೆ ಸರಿಯಲ್ಲ.

14. ಆದ್ದರಿಂದ ವಾದಿ ತಹಸೀಲ್ದಾರವರಿಗೆ ದೂರನ್ನು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಹಸೀಲ್ದಾರವರು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಮಾಡಿ ವಾದಿಗೆ ಬುದ್ದಿವಾದ ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಅದಾದನಂತರದಲ್ಲಿ ವಾದಿ ನಮ್ಮ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೋಲಿಸರು ಸಹ ಸ್ಥಳ ತನಿಖೆ ಮಾಡಿ ವಾದಿಗೆ ಬುದ್ದಿವಾದ ಹೇಳಿ ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರದಲ್ಲಿ ವಾದಿ ಜಿಲ್ಲಾಧಿಕಾರಿಯವರಿಗೂ ಸಹ ದೂರನ್ನು ನೀಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ರೀತಿ ಸುಳ್ಳು ದೂರನ್ನು ನೀಡಬಾರದೆಂದು ಜಿಲ್ಲಾಧಿಕಾರಿಯವರು ಸಹ ವಾದಿಗೆ ಬುದ್ದಿವಾದ ಹೇಳಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ಅದೇ ರೀತಿ ಹುಣಸೂರಿನ ಉಪವಿಭಾಗಾಧಿಕಾರಿಗಳಿಗೆ ವಾದಿ ದೂರನ್ನು ನೀಡಿದ್ದರು ಎಂದರೆ ಸರಿ. ವಾದಿ ನೀಡಿದ ದೂರಿನ ಮೇರೆಗೆ ಸಂಬಂದಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ

ಜಿಲ್ಲಾಧಿಕಾರಿಯವರು, ಪೋಲಿಸ್ ವರಿಷ್ಠಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ನಿರ್ದೇಶಿರುತ್ತಾರೆ ಎಂದರೆ ಸರಿಯಲ್ಲ.

15. ಅದಾದನಂತರ ನಾವು ಶಬ್ದ ಮಾಲೀನ್ಯ ಮಾಡಬಾರದೆಂದು ಪುರಸಭೆ ಅಧಿಕಾರಿಗಳು ನಮಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಪುರಸಭೆ ಅಧಿಕಾರಿಗಳ ಮಾತನ್ನು ಉಲ್ಲಂಘಿಸಿ ಶಬ್ದ ಮಾಲೀನ್ಯ ಮಾಡುವುದನ್ನು ಮುಂದುವರೆಸಿದ ಕಾರಣ ದಿನಾಂಕ 17.02.2018 ರಂದು ಪುರಸಭೆ ಅಧಿಕಾರಿಗಳು ನನಗೆ ಅಂತಿಮ ನೋಟಿಸನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಪುರಸಭೆಯವರು ನೀಡಿದ ನೋಟಿಸನ್ನು ಪಡೆದು ನಾನು ಪುರಸಭೆ ಅಧಿಕಾರಿಗಳೊಂದಿಗೆ ಮಾತನಾಡಿದಾಗ ಪುರಸಭೆ ಅಧಿಕಾರಿಗಳು ಸ್ಥಳಕ್ಕೆ ಬಂದು ಮಹಜರ್ ಮಾಡಿ ವಾದಿಗೆ ಬುದ್ದಿವಾದ ಹೇಳಿ ನಂತರದಲ್ಲಿ ನನಗೆ ಪರವಾನಿಗೆಯನ್ನು ಸಹ ನೀಡಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಾನು 2008-09 ರಿಂದ ನನ್ನ ಕಾರ ವರ್ಕಶಾಪ್ ನ್ನು ನಡೆಸುತ್ತಿದ್ದು, ಕಾರ್ ವರ್ಕಶಾಪ್ ನಡೆಸಲು ಪರವಾನಿಗೆ ಪಡೆಯಬೇಕು ಎಂಬ ಮಾಹಿತಿ ಇಲ್ಲದಿದ್ದ ಕಾರಣ ಈ ಹಿಂದೆ ಪರವಾನಿಗೆಯನ್ನು ಪಡೆಯದಿದ್ದು, ಇತ್ತೀಚೆಗೆ 2020 ರಲ್ಲಿ ಪುರಸಭೆಯಿಂದ ಕಾರ್ ವರ್ಕಶಾಪ್ ನಡೆಸಲು ಪರವಾನಿಗೆ ಪಡೆದಿರುತ್ತೇನೆ. 2020 ರವರೆಗೂ ಯಾವುದೇ ಪರವಾನಿಗೆ ಇಲ್ಲದೇ ನೀವು ಕಾನೂನುಬಾಹಿರವಾಗಿ ವರ್ಕಶಾಪ್ ನಡೆಸುತ್ತಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಆಗ ನನಗೆ ಪರವಾನಿಗೆ ಪಡೆಯಬೇಕು ಎನ್ನುವ ಮಾಹಿತಿ ಇರಲಿಲ್ಲ ಎಂದು ನುಡಿದಿರುತ್ತಾರೆ.

16. ವಾದಿಯು ದೂರನ್ನು ಸಲ್ಲಿಸಿದ್ದ ಮೇಲಾಧಿಕಾರಿಗಳೆಲ್ಲರೂ ಸಹ ವಾದಿಗೆ ಬುದ್ದಿವಾದವನ್ನು ಹೇಳಿದ್ದು, ಅದರ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ವಾದಿಯು ನನ್ನ ವಿರುದ್ಧ ನೀಡಿದ ದೂರಿನ ಬಗ್ಗೆ ದಿನಪತ್ರಿಕೆಯಲ್ಲಿಯೂ ಸಹ ಪ್ರಕಟಣೆಯಾಗಿತ್ತು ಎಂದರೆ ಸರಿ.

17. ವಾದಿಯ ಹೆಂಡತಿಯ ಆರೋಗ್ಯ ಸ್ಥಿತಿಯ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಕಾರಿನ ವರ್ಕಶಾಪ್ ನಿಂದ ಉಂಟಾಗುತ್ತಿರುವ ಶಬ್ದ ಮಾಲೀನ್ಯದಿಂದ ವಾದಿಯ ಹೆಂಡತಿಯಾದ ಸುಮಯರವರು ನರ ಸಂಬಂಧಿ ಖಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆಗೆ 80 ರಿಂದ 85 ವರ್ಷ ವಯಸ್ಸಾಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ನನ್ನ ವರ್ಕಶಾಪ್ ನಿಂದ

ಬರುತ್ತಿರುವ ಶಬ್ದ ಮಾಲೀನ್ಯ ತಡೆಯಾಗದೆ ವಾದಿಯ ತಂದೆ ದಾವಾ ಆಸ್ತಿಯ ಹಿಂಬಾಗದಲ್ಲಿರುವ ಶೆಡ್ ನಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ.

18. ನಾನು ನಡೆಸುತ್ತಿರುವ ಕಾರ ಶಾಪ್ ನಿಂದ ಬರುವ ವಿಷಕಾರಿ ಹೊಗೆ, ವಿಷಪೂರಿತ ರಾಸಾಯನಿಕ ವಸ್ತುಗಳಿಂದ ಹಾಗೂ ಶಬ್ದ ಮಾಲೀನ್ಯದಿಂದ ವಾದಿ ಮತ್ತು ಅವರ ಕುಟುಂಬದವರಿಗೆ ಆರೋಗ್ಯದ ಮೇಲೆ ಮತ್ತು ಅವರ ಜೀವನ ಶೈಲಿಯ ಮೇಲೆ ಕೆಟ್ಟ ಪ್ರಭಾವ ಬೀರುತ್ತದೆ ಎಂದರೆ ಸರಿಯಲ್ಲ. ನನ್ನ ಕಾರ್ ವರ್ಕಶಾಪ್ ಗೆ ಯಾವುದೇ ಗೋಡೆ ಇಲ್ಲ ಬದಲಾಗಿ ತೆರೆದ ಜಾಗದಲ್ಲಿ ನಾನು ಕಾರ್ ವರ್ಕಶಾಪ್ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ.

19. ನಿಪಿ.7, 9 ಮತ್ತು 10 ರಲ್ಲಿ ಕಾಣುತ್ತಿರುವ ಸ್ಥಳದಲ್ಲಿಯೇ ನಾನು ನನ್ನ ಕಾರ್ ವರ್ಕಶಾಪ್ ನಡೆಸುತ್ತಿದ್ದೇನೆ ಎಂದರೆ ಸರಿ. ನನ್ನ ಕಾರ್ ವರ್ಕಶಾಪ್ ಗೆ ಗೋಡೆಯಿರುವ ಬಗ್ಗೆಯಾಗಲೀ ಶೆಡ್ ಇರುವ ಬಗ್ಗೆಯಾಗಲೀ ನಿಪಿ.7, 9 ಮತ್ತು 10 ರಲ್ಲಿ ಕಂಡುಬರುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ.7 ರಲ್ಲಿ ಒಂದು ಮರದ ಅಡಿಯಲ್ಲಿ ಕಾಣುತ್ತಿರುವ ತಗಡಿನ ಸಣ್ಣ ಶೆಡ್ಡ ನಲ್ಲಿ ನಾನು ಗಾಡಿಗಳನ್ನು ರಿಪೇರಿ ಮಾಡುತ್ತೇನೆ. ಸದರಿ ಶೆಡ್ಡಿನೊಳಗೆ ಗಾಡಿಗಳು ನಿಲ್ಲುವಷ್ಟು ಜಾಗವಿದೆ. ಸದರಿ ಶೆಡ್ಡಿನ ವಿಸ್ತೀರ್ಣ 15 x 17 ಅಡಿ ಇರುತ್ತದೆ. ನಿಪಿ.7 ರ ಮರದ ಕೆಳಗೆ ಕಾಣುತ್ತಿರುವ ಸಣ್ಣ ಶೆಡ್ಡು ಕೇವಲ 5 x 5 ಅಡಿ ವಿಸ್ತೀರ್ಣದ ಶಡ್ಡಾಗಿದ್ದು ಅದರಲ್ಲಿ ವಾಹನಗಳನ್ನು ನಿಲ್ಲಿಸುವಷ್ಟು ಸ್ಥಳಾವಕಾಶ ಇಲ್ಲ ಬದಲಾಗಿ ನಾನು ಉಪಯೋಗಿಸುತ್ತಿರುವ ರಿಪೇರಿ ಸಲಕರಣೆಗಳನ್ನು ಇಡಲು ಮಾತ್ರ ಸದರಿ ಶೆಡ್ಡನ್ನು ಬಳಸುತ್ತಿದ್ದೇನೆ ಎಂದರೆ ಸರಿಯಲ್ಲ.

20. ಮಾನ್ಯ ಲೋಕಾಯುಕ್ತರ ನ್ಯಾಯಾಲಯದಲ್ಲಿಯೂ ಸಹ ನನ್ನ ಕಾರ್ ವರ್ಕಶಾಪ್ ಗೆ ಸಂಬಂಧಿಸಿದಂತೆ ವಿಚಾರಣೆ ನಡೆಯುತ್ತಿದೆ ಎಂದರೆ ಸರಿಯಲ್ಲ. ಕಾರ್ ವರ್ಕಶಾಪ್ ನಿಂದ ಆಗುವ ತೊಂದರೆಗಳ ಬಗ್ಗೆ ನನ್ನ ಬಳಿ ಹೇಳಲು ಬಂದಾಗ ನಾನು ಮತ್ತು ನನ್ನ ಕೈಕೆಳಗೆ ಕೆಲಸ ಮಾಡುವ ಹುಡುಗರು ವಾದಿಗೆ ಜೀವದ ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಅದರ ಸಂಬಂದ ವಾದಿ ಪೋಲಿಸ್ ಠಾಣೆಯಲ್ಲಿ ನಮ್ಮ ವಿರುದ್ಧ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ವಾದಿ ನನ್ನ ವಿರುದ್ಧ ಹಲವಾರು ಮೇಲಾಧಿಕಾರಿಗಳ ಮುಂದೆ ದೂರನ್ನು ಸಲ್ಲಿಸಿದ ಕಾರಣ ಅವರಿಗೆ ಇನ್ನೂ ಜಾಸ್ತಿ ತೊಂದರೆ ಕೊಡುವ ಉದ್ದೇಶದಿಂದ ನಾನು ಹೆಚ್ಚಿನ ಪ್ರಮಾಣದಲ್ಲಿ ಶಬ್ದ ಮಾಲೀನ್ಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಬ್ಬಿಣದ ಉಪಕರಣಗಳಿಂದ

ಕೆಲಸ ಮಾಡುತ್ತಿರುವ ಕಾರಣ ಶಬ್ದಮಾಲೀನ್ಯ ಉಂಟಾಗುತ್ತಿದೆ ಎಂದರೆ ಸರಿಯಲ್ಲ. ವಾದಿ ದುರ್ಬಲರಾಗಿರುವ ಕಾರಣ ನಾನು ಮತ್ತು ನನ್ನ ಸಂಗಡಿಗರು ಸೇರಿ ಹೆಚ್ಚಿನ ಶಬ್ದ ಮತ್ತು ವಾಯು ಮಾಲೀನ್ಯವನ್ನು ಮಾಡಿ ವಾದಿ ಮತ್ತು ಅವರ ಕುಟುಂಬದವರಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

21. ಶಬ್ದ ಮಾಲೀನ್ಯ ಮತ್ತು ವಾಯು ಮಾಲೀನ್ಯ ಆಗದಂತೆ ನೀವು ಯಾವುದಾದರೂ ಮುಂಜಾಗೃತೆ ಕ್ರಮ ಕೈಗೊಳ್ಳುತ್ತಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ಶಬ್ದ ಮಾಲೀನ್ಯ ಮಾಡುತ್ತಿಲ್ಲ ಎಂದು ನುಡಿದಿರುತ್ತಾರೆ. ನಾನು ಉದ್ದೇಶಪೂರ್ವಕವಾಗಿ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**